Download (GetImages.ashx?fn=http://indiamediamonitor.in/2021/10/26/Bengaluru/thumbnail/402f626a-357e-4ab4-a248-6fbfc752bff3thumbnail.jpg)

**ಆಶಯ** ಇದರಿಂದ ಮೋದಿ 3 ಶತಕೋಟಿ ಆರ್ಥಿಕತೆ ಕನಸು ನನಸು: ರಾಜೀವ್ ಚಂದ್ರಶೇಖರ್ | ಮೈಸೂರಿನ ಬಿಗ್‌ಟೆಕ್ ಶೋನಲ್ಲಿ ವರ್ಚ್ಯುವಲ್ ಆಗಿ ಸಚಿವ ಭಾಗಿ

# 2, 3ನೇ ದರ್ಜೆ ನಗರಗಳಲ್ಲೂ ಟೆಕ್ ಆಧಾರಿತ ಉದ್ಯಮ

• **ಕನ್ನಡಪ್ರಭ ವಾರ್ತೆ** ಮೈಸೂರು

ಪ್ರಧಾನಿ ಮೋದಿ ಅವರು ಕನಸಿನ ಮೂರು ಶತಕೋಟಿ ಆರ್ಥಿಕತೆ ಸಾಕಾರಗೊಳ್ಳಲು ದ್ವಿತೀಯ ಮತ್ತು ತೃತೀಯ ದರ್ಜೆ ನಗರಗಳಲ್ಲೂ ತಂತ್ರಜ್ಞಾನ ಆಧಾರಿತ ಉದ್ಯಮ ಆರಂಭವಾಗಬೇಕು ಎಂದು ಕೇಂದ್ರ ಕೌಶಲ್ಯಾಭಿವೃದ್ಧಿ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದರು.

ನಗರದಲ್ಲಿ ಸೋಮವಾರ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಆಯೋಜಿಸಿದ್ದ ಬಿಯಾಂಡ್ ಬೆಂಗಳೂರು ಅಭಿಯಾನದ ಅಡಿ ಮೈಸೂರಿನ ಬಿಗ್ ಟೆಕ್ ಶೋನಲ್ಲಿ ವರ್ಚ್ಯುವಲ್ ಮೂಲಕ ಪಾಲ್ಗೊಂಡು ಮಾತನಾಡಿದರು.



ಪ್ರಧಾನಿ ಮೋದಿ ಅವರು 3 ಶತಕೋಟಿ ಆರ್ಥಿಕತೆ ಎಂಬ ಪರಿಕಲ್ಪನೆಯೊಂದಿಗೆ ಯೋಜನೆ ರೂಪಿಸುತ್ತಿದ್ದಾರೆ. ಅಂತೆಯೇ ಕರ್ನಾಟಕದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಚಿವ ಅಶ್ವತ್ಥ್ ನಾರಾಯಣ್ ಅವರು ಬಿಲಿಯನ್ ಡಿಜಿಟಲ್ ಎಕಾನಮಿ ಎಂಬ ಕನಸಿನೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಇದು ಸಾಕಾರಗೊಳ್ಳಬೇಕಿದ್ದರೆ ಬಿಯಾಂಡ್ ಬೆಂಗಳೂರು ಎಂಬುದು ಸೇತುವೆಯಾಗಬೇಕು. ದ್ವಿತೀಯ ಮತ್ತು ತೃತೀಯ ದರ್ಜೆ ನಗರಗಳಿಗೆ ಹೆಚ್ಚಿನ ಕಂಪನಿಗಳು ಬಂದಿಲ್ಲ. ಬಿಯಾಂಡ್ ಬೆಂಗಳೂರಿನಂತಹ ಕಾರ್ಯಕ್ರಮಗಳಿಂದ ಈ ನಿಟ್ಟಿನಲ್ಲಿ ಹೆಚ್ಚು ಅನುಕೂಲವಾಗುತ್ತದೆ ಎಂದರು.

ಕೋವಿಡ್ ನಂತರದ ದಿನಗಳಲ್ಲಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಬಳಕೆ ಮತ್ತು ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ. 2014ರ ನಂತರ ಎಲೆಕ್ಟ್ರಾನಿಕ್ ಬಳಕೆ ಹೆಚ್ಚಾಗುತ್ತಿದ್ದು, 72 ಬಿಲಿಯನ್ ಡಾಲರ್ ಎಲೆಕ್ಟ್ರಾನಿಕ್ ವಸ್ತುಗಳ ಉತ್ಪಾದನೆ ಆಗಿದೆ. 2025ರ ವೇಳೆಗೆ ಇದು 300 ಬಿಲಿಯನ್ ಡಾಲರ್‌ಗೆ ಮುಟ್ಟುವ ಗುರಿ ಇದೆ. ಹೊಸ ಅವಕಾಶಗಳು ಸೃಷ್ಟಿಯಾಗುತ್ತಿದೆ. ಡಿಜಿಟಲ್ ಸಂಪರ್ಕ, ಅವಕಾಶಗಳು ಬೆಂಗಳೂರು, ಪುಣೆ, ಹೈದರಾಬಾದ್, ಚೆನ್ನೈ, ಗುರುಗ್ರಾಮ ಮುಂತಾದ ನಗರವನ್ನು ಹೊರತುಪಡಿಸಿ, ಇತರೆ ನಗರಗಳಿಗೂ ದೊರೆಯುವಂತಾಗಿದೆ. ವರ್ಚ್ಯುವಲ್ ಟೆಕ್‌ಪಾರ್ಕ್‌ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಉತ್ತೇಜನ ನೀಡುತ್ತಿದೆ ಎಂದು ಅವರು ವಿವರಿಸಿದರು.

ವಿಜ್ಞಾನ, ತಂತ್ರಜ್ಞಾನ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ್ ಮಾತನಾಡಿ, ಬಿಯಾಂಡ್ ಬೆಂಗಳೂರಿನಿಂದ ಮೈಸೂರಿನಲ್ಲಿ ಮತ್ತಷ್ಟು ಉದ್ಯೋಗಾವಕಾಶ ಸೃಷ್ಟಿಯಾಗುತ್ತಿದ್ದು, ಪದವೀಧರರಿಗೆ ಒಂದು ಪರೀಕ್ಷೆ ಆಯೋಜಿಸಿ ಉತ್ತೀರ್ಣರಾದವರಿಗೆ ಲಾಂಚ್‌ಪ್ಯಾಡ್ ಮೂಲಕ ಮತ್ತಷ್ಟು ಕೌಶಲ್ಯಾಭಿವೃದ್ಧಿ ನೀಡಲು ಯೋಜನೆ ರೂಪಿಸಿದ್ದೇವೆ. ಇದು ಯುವಕರು ಉದ್ಯಮಿಗಳಾಗಲು ಮತ್ತು ಉದ್ಯೋಗಿಗಳಾಗಲು ನೆರವಾಗುತ್ತದೆ ಎಂದರು. ಈ ಅಭಿಯಾನದ ಮೂಲಕ 2ನೇ ಮತ್ತು 3ನೇ ಹಂತದ ನಗರಗಳ ಹೊಸ ಎಂಜಿನಿಯರಿಂಗ್ ಪದವೀಧರರು ವೃತ್ತಿ ಜೀವನವನ್ನು ಆರಂಭಿಸುವ ಅವಕಾಶ ಪಡೆಯುತ್ತಾರೆ ಎಂದರು.